		ಅಂದಾಜು ವೆಚ್ಚ (ಲಕ್ಷ ರೂ.ಗಳಲ್ಲಿ)
1)	ಪ್ರವಾಸಿ ಸಂಕೀರ್ಣ	40.00
2)	ದೃಶ್ಯ ಮತ್ತು ಶ್ರವಣ ಯೋಜನೆ	30.00
3)	ಸುಲಭ ಶೌಚಾಲಯ	4.00

ಆ) ಇಮವರೆಗೆ ಹಣ ಬಿಡುಗಡೆ ಮಾಡಿಲ್ಲ.

ಇ) 1993-94ನೇ ಸಾಲಿನಲ್ಲಿ ಕೇಂದ್ರ ಸರ್ಕಾರ ರೂ. 45.00 ಲಕ್ಷಗಳನ್ನು ಮಂಜೂರು ಮಾಡಿರುತ್ತದೆ.

ಈ) ಇಲ್ಲ.

ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ ಆಹಾರ ಧಾನ್ಯ ವಿತರಣೆ ಆಗದಿರುವುದು.

45 - ಶ್ರೀ ಬಿ.ಎಂ.ಇದಿನಬ್ಬ (ಉಳ್ಳಾಲ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಳ್ಳಾಲ ವಿಧಾನ ಸಭಾ ಕ್ಷೇತ್ರದ ಯಾವ ಯಾವ ನ್ಯಾಯ ಬೆಲೆ ಅಂಗಡಿಗಳಲ್ಲಿ ಆಹಾರ ಧಾನ್ಯ ಮತ್ತು ಸೀಮೆಎಣ್ಣೆ ಮತ್ತು ಪಾಮೋಲಿನ್ ಎಣ್ಣೆ ಸರಿಯಾಗಿ ವಿತರಣೆಯಾಗದೇ ತೊಂದರೆಯಾಗಿರುವುದಾಗಿ ದೂರುಗಳೂ ಸರ್ಕಾರಕ್ಕೆ ಬಂದಿವೆಯೇ? (ವಿವರ ಕೊಡುವುದು)

ಆ) ವ್ಯವಸ್ಥಿತವಾಗಿ ಆಹಾರ ಪದಾರ್ಥಗಳು, ಸೀಮೆಎಣ್ಣೆ ವಿತರಣೆ ಮಾಡದೇ ತೊಂದರೆ ಮಾಡಿದ ನ್ಯಾಯ ಬೆಲೆ ಅಂಗಡಿಗಳನ್ನು ಬದಲಾಯಿಸಲಾಗುವುದೇ?

ಇ) ಸರಿಯಾಗಿ ನಡೆಸುವವರಿಗೆ ಲೈಸೆನ್ಸ್ ಕೊಡಲಾಗುವುದೇ?

ಈ) ದೂರುಗಳು ಬಂದಿರುವ ನ್ಯಾಯಬೆಲೆ ಅಂಗಡಿಗಳ ಮಾಲೀಕರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ಇಲ್ಲ.

ಆ) ಹೌದು.

ಇ) ಹೊಸ ನ್ಯಾಯ ಬೆಲೆ ಅಂಗಡಿ ಅವಶ್ಯಕತೆ ಕಂಡುಬಂದಲ್ಲಿ, ಕರ್ನಾಟಕ ಅಗತ್ಯ ವಸ್ತುಗಳ (ಪಿಡಿಎಸ್) ಕಂಟ್ರೋಲ್ ಆರ್ಡರ್ 1992 ಮೇರೆಗೆ ಪರಿಶೀಲಿಸಿ ಪ್ರಾಧಿಕಾರ ನೀಡಲಾಗುವುದು.

ಈ) ಯಾವುದೇ ನ್ಯಾಯ ಬೆಲೆ ಅಂಗಡಿಗಳಲ್ಲಿ ಸಮರ್ಪಕವಾಗಿ ವಿತರಣೆ ಮಾಡುತ್ತಿಲ್ಲವೆಂದು ದೂರುಗಳು ಬಂದಲ್ಲಿ, ಕಾನೂನಿನಂತೆ ತನಿಖೆಗೆ ಒಳಪಡಿಸಿ, ಕ್ರಮ ಕೈಗೊಳ್ಳಲಾಗುತ್ತದೆ. ಅಂತಹ ಸಂದರ್ಭದಲ್ಲಿ ವಿತರಣೆಯನ್ನು ಸಮರ್ಪಕವಾಗಿ ನಿರ್ವಹಿಸಲು ಪರ್ಯಾಯ ವ್ಯವಸ್ಥೆ ಮಾಡಲಾಗುತ್ತದೆ.

ಮೈಸೂರು ಸಕ್ಕರೆ ಕಾರ್ಖಾನೆಯ ಹೊಗೆ ಚಿಮಣಿಯಿಂದ ಬರುವ ಕಾರ್ಬನ್ ಕಣಗಳನ್ನು ತಡೆಗಟ್ಟುವ ಬಗ್ಗೆ

264 - ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ವಿಜ್ಞಾನ ಮತ್ತು ಯಂತ್ರಕಲಾ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯ ಹೊಗೆಯ ಚಿಮಣಿಯಿಂದ ಕಾರ್ಬನ್ ಕಣಗಳು ಹೊರಬರುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಜನರ ಆರೋಗ್ಯದ ರಕ್ಷಣೆ ಮಾಡಲು ಈ ಕಾರ್ಬನ್ ಕಣಗಳು ಹೊರಬರುವುದನ್ನು ತಡೆಗಟ್ಟಲು ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಎನ್. ಜಿ. ಹಾಲಪ್ಪ (ಪರಿಸರ ಮತ್ತು ಜೀವಿಶಾಸ್ತ್ರ, ವಿಜ್ಞಾನ ಮತ್ತು ಯಂತ್ರಕಲಾ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ರಾಜ್ಯ ಸಚಿವರು.)

ಅ) ಹೌದು, ಮೈಸೂರು ಸಕ್ಕರೆ ಕಾರ್ಖಾನೆಯ ಹೊಗೆ ಚಿಮಣಿಯಿಂದ ಕಪ್ಪು ಬಣ್ಣದ ಧೂಳು (Fly ash) ಹೊರಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಮೈಸೂರು ಸಕ್ಕರೆ ಕಂಪನಿ ಲಿ. ಒಟ್ಟು ಆರು ಬಾಯ್ಲರ್ ಗಳನ್ನು ಹೊಂದಿದ್ದು ಇದಕ್ಕೆ ಮೂರು ಚಿಮಣಿಗಳನ್ನು ಅಳವಡಿಸಲಾಗಿದೆ. ಇವುಗಳ ವಿವರ ಕೆಳಕಂಡಂತಿರುತ್ತದೆ.

ಚಿಮಣಿ ಸಂಖ್ಯೆ	ಚಿಮಣಿಗೆ ಅಳವಡಿಸಿರುವ ಬಾಯ್ಲರುಗಳು	ಚಿಮಣಿ ಎತ್ತರ
ಒಂದು	ಗಂಟೆಗೆ 20 ಟನ್ ಸಾಮರ್ಥ್ಯದ ಮೂರು ಬಾಯ್ಲರುಗಳು.	45 ಮೀ.
ಎರಡು	ಗಂಟೆಗೆ 40 ಟನ್ ಸಾಮರ್ಥ್ಯದ ಎರಡು ಬಾಯ್ಲರುಗಳು.	48 ಮೀ.
ಮೂರುಗಂಟೆಗೆ	30 ಟನ್ ಸಾಮರ್ಥ್ಯದ ಒಂದು ಬಾಯ್ಲರ್ (ಕಲ್ಲಿದ್ದಲಿನದು).	16 ಮೀ.

ಈ ಉದ್ದಿಮೆಯು ತನ್ನ ಬಾಯ್ಲರ್ಗಳಿಂದ ಹೊರಬರುವ ಧೂಳನ್ನು ನಿಯಂತ್ರಿಸಲು ಫ್ಲೈ ಆಶ್ ಅರೆಸ್ಟರ್ ಎಂಬ ವಾಯು ಮಾಲಿನ್ಯ ನಿಯಂತ್ರಣ ಉಪಕರಣವನ್ನು ಒಂದು 20 ಟಿಪಿಹೆಚ್ ಬಾಯ್ಲರ್ ಹಾಗೂ ಒಂದು 30 ಟನ್ಸ್ ಪರ್ ಅವರ (ಕಲ್ಲಿದ್ದಲಿನ ಬಾಯ್ಲರ್) ಹೊರತುಪಡಿಸಿ ಮಿಕ್ಕೆಲ್ಲ ಬಾಯ್ಲರ್ಗಳಿಗೆ ಅಳವಡಿಸಿದೆ. 20 ಟಿಪಿಹೆಚ್ ಬಾಯ್ಲರ್ನ್ನು ತೆಗೆದು ಹಾಕುವ ಉದ್ದೇಶವನ್ನು ಉದ್ದಿಮೆಯು ಹೊಂದಿದೆ. 30 ಟಿಪಿಹೆಟ್ ಬಾಯ್ಲರ್ನಲ್ಲಿ ಮದ್ಯಸಾರ ಘಟಕದಿಂದ ಬರುವ ಕಲುಷಿತ ನೀರನ್ನು ಶುದ್ಧೀಕರಿಸಲು ಅಳವಡಿಸಿರುವ ಡೈಸೆಸ್ಟರ್ನಿಂದ ಬರುವ ಮಿಥೇನ್ ಅನಿಲವನ್ನು ಬಳಸಲು ಉದ್ದೇಶಿಸಲಾಗಿದೆ. ಇದರಿಂದ ಧೂಳು ಉತ್ಪತ್ತಿ ಆಗುವುದಿಲ್ಲ. ಈಗಿರುವ ವಾಯು ಮಾಲಿನ್ಯ ನಿಯಂತ್ರಣ ಘಟಕವನ್ನು ಉದ್ದಿಮೆಯು ಉತ್ತಮಪಡಿಸಬೇಕಾಗಿದೆ. ವೆಟ್ಸ್ಕ್ರಬರ್ ಎಂಬ ಹೆಚ್ಚುವರಿ ಮಾಲಿನ್ಯ ನಿಯಂತ್ರಣ ಘಟಕವನ್ನು ಈಗಿರುವ ಮಲ್ಟಿ ಸೈಕ್ಲೋನ್ಗಳ ಜೊತೆಗೆ 2-20 ಟಿಪಿಹೆಚ್ ಬಾಯ್ಲರ್ಗೆ ಅಳವಡಿಸಲಾಗಿದೆ. ಈ ಹೊಸ ಉಪಕರಣದ ಸಾಮರ್ಥ್ಯವು ಚೆನ್ನಾಗಿದ್ದಲ್ಲಿ 2-40 ಟಿಪಿಹೆಚ್ ಬಾಯ್ಲರ್ಗೂ ಅಳವಡಿಸುವ ಉದ್ದೇಶವನ್ನು ಉದ್ದಿಮೆಯು ಹೊಂದಿದೆ.

ಭಾರತ ಸರ್ಕಾರವು ಪರಿಸರ (ಸಂರಕ್ಷಣಾ) ಕಾಯ್ದೆಯಡಿಯಲ್ಲಿ, ಉದ್ದಮೆಗಳು ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಪೂರ್ಣಗೊಳಿಸಲು ನಿಗದಿಪಡಿಸಿದ್ದ ಕಾಲ ಮಿತಿಯು 31-12-93ರಂದು ಕೊನೆಗೊಂಡಿರುತ್ತದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ವಾಯು ಕಾಯ್ದೆ ಹಾಗೂ ಜಲ ಕಾಯ್ದೆಯ ಕಲಂ 18(1) (ಬಿ) ಅಡಿಯಲ್ಲಿ ಹೊರಡಿಸಿರುವ ಆದೇಶದಂತೆ, ರಾಜ್ಯ ಮಂಡಳಿಯು ಉದ್ದಿಮೆಗಳು ಪ್ರಾಮಾಣಿಕವಾಗಿ ಮಾಲಿನ್ಯ ನಿಯಂತ್ರಣ ಕಾರ್ಯಗಳ ಅನುಷ್ಠಾನವನ್ನು ಕೈಗೊಂಡಿದ್ದಲ್ಲಿ, ಅಂತಹ ಉದ್ದಿಮೆಗಳಿಗೆ ಮಾಲಿನ್ಯ ನಿಯಂತ್ರಣ ಕೆಲಸಗಳನ್ನು ಪೂರ್ಣಗೊಳಿಸಲು ಕಾಲಾವಕಾಶವನ್ನು

6 ತಿಂಗಳಿಗೆ ಮೀರದಂತೆ ಕೊಡಬಹುದೆಂದು ಆದೇಶಿಸಿದೆ. ಹೆಚ್ಚುವರಿ ಕಾಲಾವಕಾಶವನ್ನು ನೀಡುವ ಬಗ್ಗೆ ನಿರ್ಧಾರ ಮಾಡಲು, ಮಂಡಳಿಯು ಮಾಹಿತಿಯನ್ನು ಸಂಗ್ರಹಿಸುತ್ತಿದೆ.

ಮಂಡ್ಯ ಜಿಲ್ಲೆಯಲ್ಲಿನ ಹಸಿರು ಕಾರ್ಡುದಾರರ ಸಂಖ್ಯೆ

263-ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಹಸಿರು ಕಾರ್ಡು ಹೊಂದಿರುವವರ ಸಂಖ್ಯೆ ಎಷ್ಟು?

ಆ) ಅವರಿಗೆ ಯಾವ ಪ್ರಮಾಣದಲ್ಲಿ ಪಡಿತರ ಪದಾರ್ಥಗಳನ್ನು ವಿತರಿಸಲಾಗುತ್ತಿದೆ.

ಇ) ಮಂಡ್ಯ ಜಿಲ್ಲೆಯಲ್ಲಿ ಪ್ರಸ್ತುತ ಹಂಚಿಕೆಯಾಗುತ್ತಾ ಇರುವ ಸೀಮೆಎಣ್ಣೆ ಪ್ರಮಾಣವೆಷ್ಟು?

ಶ್ರೀಮತಿ ಮನೋರಮ ಮದ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) 1.55 ಲಕ್ಷ (ತ್ರಿವರ್ಣ)

ಆ) ಹಸಿರು ಪಡಿತರ ಚೀಟಿದಾರರಿಗೆ (ತ್ರಿವರ್ಣ ಪಡಿತರ ಚೀಟಿ) ಪ್ರತಿ ಕಾರ್ಡಿಗೆ 6 ಕೆ.ಜಿ. ಅಕ್ಕಿ ಮತ್ತು 4 ಕೆ.ಜಿ. ಗೋಧಿಯಂತೆ ಒಟ್ಟು 10 ಕೆ.ಜಿ. ಕಡ್ಡಾಯವಾಗಿ ಆಹಾರಧಾನ್ಯಗಳನ್ನು ಸಬ್ಸಿಡಿ ದರದಲ್ಲಿ ಒದಗಿಸಲಾಗುತ್ತಿದೆ. ಸಕ್ಕರೆ 2 ಕೆ.ಜಿ.ಯಂತೆ ಪ್ರತಿ ಕಾರ್ಡಿಗೆ ತಿಂಗಳಿಗೆ ನೀಡಲಾಗುತ್ತಿದೆ.

ಇ) ಮಂಡ್ಯ ಜಿಲ್ಲೆಗೆ ಪ್ರತಿ ತಿಂಗಳಿಗೆ 1236 ಕೆ.ಎಲ್. ಪಟ್ಟಣ ಪ್ರದೇಶದಲ್ಲಿ ಪ್ರತಿ ಕಾರ್ಡುದಾರರಿಗೆ 6 ಲೀಟರ್ ಸೀಮೆಎಣ್ಣೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ 3 ಲೀಟರ್ನಂತೆ ನೀಡಲಾಗುತ್ತಿದೆ.

ಬೆಂಗಳೂರು ನಗರದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಗೊಳಿಸುವ ಬಗ್ಗೆ

297-ಶ್ರೀ ಆರ್. ವಿ. ದೇವರಾಜ್ (ಚಾಮರಾಜಪೇಟೆ) : ಮಾನ್ಯ ಪ್ರವಾಸೋದ್ಯಮ ಹಾಗೂ ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದವರು ಯಾವ ಯಾವ ಸ್ಥಳಗಳನ್ನು ಬೆಂಗಳೂರು ನಗರದ ಪ್ರವಾಸಿ ಕಾರ್ಯಕ್ರಮದಲ್ಲಿ ತೋರಿಸುತ್ತಿರುವರು?

ಆ) ಬೆಂಗಳೂರಿನಲ್ಲಿರುವ ದೊಡ್ಡ ಗಣಪತಿ ದೇವಸ್ಥಾನ, ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್ ಹಾಗೂ ನಂದಿಬೆಟ್ಟಗಳನ್ನೂ ಆ ಪ್ರವಾಸಿ ಕಾರ್ಯಕ್ರಮದಲ್ಲಿ ಸೇರಿಸಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು):

ಅ) ಬೆಂಗಳೂರು ನಗರದ ಪ್ರವಾಸದ ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ಈ ಕೆಳಕಂಡ ಸ್ಥಳಗಳನ್ನು ಆಳವಡಿಸಿಕೊಂಡಿದೆ.

ವಿಧಾನ ಸೌಧ, ಲಾಲ್ಬಾಗ್, ಬಸವನಗುಡಿ (ದೊಡ್ಡ ಗಣಪತಿ ದೇವಸ್ಥಾನ ಸೇರಿದಂತೆ) ಟಿಪ್ಪು ಅರಮನೆ, ಸರ್ಕಾರಿ ವಸ್ತು ಸಂಗ್ರಹಾಲಯ ಕಾವೇರಿ ಕರಕುಶಲ ಮಳಿಗೆ ಮತ್ತು ಅಲಸೂರು ಕೆರೆ.

ಆ) ಪ್ರಾದು.